ಹೋಗಬೇಕಾಗುತ್ತಿತ್ತು. ಅದೊಂದು ದಿನ ಆತ ಬಸ್ಸಿಗೆ ಮೂಟೆ ಹಾಕುತ್ತಿದ್ದಾಗ ಮೇಲಿನಿಂದ ಬಿದ್ದ. ತುಂಬಾ ಏಟು ಮಾಡಿಕೊಂಡಿದ್ದ. ಅವೆಲ್ಲ ಸರಿಯಾಯಿತು; ಆದರೆ, ಕಣ್ಣಿನ ದೃಷ್ಟಿಗೆ ಜೋರಾದ ಏಟು ಬಿದ್ದಿದೆ. ಆಪರೇಷನ್ ಮಾಡಿದರೆ ಮತ್ತೆ ಕಣ್ಣು ಕಾಣಿಸುತ್ತದೆಂದು ಡಾಕ್ಟರ್ ಹೇಳಿದ್ದಾರೆ. ತುಂಬ ಖರ್ಚಾಗುತ್ತದಂತೆ. ಆತ ದುಡಿಯುತ್ತಿದ್ದಾಗ ನಾನು ಮನೆಯಲ್ಲಿಯೇ ಇರುತ್ತಿದ್ದೆ. ಆತ ಏಟು ಮಾಡಿಕೊಂಡ ನಂತರ ನಾನು ತರಕಾರಿ ವ್ಯಾಪಾರ ಮಾಡುತ್ತಿದ್ದೇನೆ. ಆತನ ಆಪರೇಷನ್‌ಗೆ ಹಣ ಹೊಂದಿಸಬೇಕಲ್ಲವೇ!''

``ಎಲ್ಲಿಂದ ಬರುತ್ತೀರಿ ನೀವು?''

``ಬೂಟಿಮೋಡ್ ಧಾರೇ ಆಮಾರ್ ಗಾಂವ್ ಬೋಲೇ.'' (ಬೂಟಿಮೋರ್ ಹತ್ತಿರ ನಮ್ಮ ಊರು).

``ತರಕಾರಿ ನಿಮ್ಮ ಹೊಲದಲ್ಲಿಯೇ ಬೆಳೆಯುತ್ತದೆಯೇ?''

``ನಾಯೀ ಗೋ, ಖರೀದ್ ಕೋರೀ.'' (ಇಲ್ಲ, ಖರೀದಿಸುತ್ತೇವೆ).

``ದಿನದಲ್ಲಿ ಎಷ್ಟು ವ್ಯಾಪಾರ ಆಗತ್ತೆ?''

``300–400 ಟಾಕಾ.'' (300–400 ರೂಪಾಯಿ).

``ಇದರಲ್ಲಿಯೇ ಆಪರೇಷನ್‌ಗೆ ದುಡ್ಡನ್ನು ಉಳಿಸುತ್ತೀಯಾ?''

``ಇಲ್ಲ, ಇದರ ಲಾಭವೆಲ್ಲ ಅಕ್ಕಿ, ಎಣ್ಣೆ, ಗೋಧಿ ಇವುಗಳಿಗೇ ಖರ್ಚಾಗಿ ಹೋಗುತ್ತದೆ.''

``ಮತ್ತೆ ಆಪರೇಷನ್‌ಗೆ?''

'ದೇವರಿದ್ದಾನೆ' ಎನ್ನುವ ಅರ್ಥದಲ್ಲಿ ಆಕೆ ಮೇಲಕ್ಕೆ ನೋಡಿದಳು. ಆಕೆಗೆ ಚಹಾ ಕುಡಿಸಿ, ತರಕಾರಿ ತೆಗೆದುಕೊಂಡು ನಾನು ಮನೆಗೆ ಹಿಂದಿರುಗಿದ್ದೆ.

★★★

ಆತ ರಂಜಿತ್. ಊರು ಬಿಹಾರದ (ಈಗಿನ ಜಾರ್ಖಂಡ್) ರಾಂಚಿ. ಬ್ಯಾಂಕ್‌ನಲ್ಲಿ ಕಿರಿಯ ಅಧಿಕಾರಿ. ನೋಡುವುದಕ್ಕೆ ಸುಂದರ. ಇನ್ನೇನು ಬೇಕು! ನನಗೆ ಗೊತ್ತಿಲ್ಲದೆಯೇ ಆತನ ಪ್ರೇಮಪಾಶದಲ್ಲಿ ನಾನು ಬಿದ್ದಿದ್ದೆ. ಆತನ ಮಾತಿನಂತೆ ಎರಡು ವರ್ಷ ಹೆಚ್ಚಿನ ವಿದ್ಯಾಭ್ಯಾಸ ಮಾಡಿದ್ದೆ; ಜೊತೆಯಲ್ಲಿ ಪ್ರೀತಿಪ್ರೇಮ. ನನ್ನ ಓದು ಮುಗಿಯುವ ಸಮಯಕ್ಕೆ ಸರಿಯಾಗಿ ಆತನೂ ರಾಂಚಿಗೆ ವರ್ಗಾವಣೆ ಮಾಡಿಸಿಕೊಂಡಿದ್ದ. ಇಬ್ಬರೂ ಮದುವೆಯಾಗಿ ರಾಂಚಿಗೆ ಹೋಗಿ ನೆಲೆಸುವುದೆಂದು ಮಾತನಾಡಿಕೊಂಡಿದ್ದೆವು. ಅಪ್ಪ ಒಪ್ಪಿದರೆ ಮದುವೆ ಮಾಡಿಕೊಂಡು ಹೋಗುವುದಕ್ಕೆ ಸಿದ್ಧರಾಗಿದ್ದೆವು.

ಈ ವಿಷಯ ಮಾತನಾಡುವುದಕ್ಕೆ ನಾನು ಊರಿಗೆ ಹೋದೆ. ಮೂವರು ತಂಗಿಯರೂ ದೊಡ್ಡವರಾಗಿದ್ದರು. ನಾಲ್ಕು ವರ್ಷಗಳ ನಂತರ ಅಕ್ಕನನ್ನು (ನನ್ನನ್ನು) ಕಂಡು ತುಂಬಾ ಸಂತೋಷಗೊಂಡಿದ್ದರು. ಯಾರಲ್ಲಿಯೂ ಜೀವಕಳೆ ಕಂಡುಬರಲಿಲ್ಲ. ನಾನೇ ಲಕ್ಕಿ ಎಂದುಕೊಂಡೆ. ಚಿಕ್ಕಮ್ಮ ಇಬ್ಬರು ಗಂಡುಮಕ್ಕಳನ್ನು ನೀಡಿದ್ದರಿಂದ ಅಪ್ಪನಿಗೆ ಬಹಳ ಪ್ರೀತಿಪಾತ್ರಳಾಗಿದ್ದಳು. ನನ್ನನ್ನು ನೋಡಿ ಅಪ್ಪನ ಮುಖದಲ್ಲಿ ನಗು ಕಂಡುಬಂತು. ಕುಶಲೋಪರಿ ಮುಗಿದ ನಂತರ ಅಪ್ಪ ಹೇಳಿದ, ``ನೀನು ಬಂದಿದ್ದು ಒಳ್ಳೆಯದೇ ಆಯಿತು. ನಿನ್ನ ಮದುವೆ ಮಾಡೋಣ ಎಂದುಕೊಂಡಿದ್ದೇನೆ.''

ನನಗೂ ಸಂತೋಷವಾಯಿತು. ವಿಷಯ ಪ್ರಸ್ತಾಪಿಸುವುದಕ್ಕೆ ಇದೇ ಒಳ್ಳೆಯ ಸಮಯ ಎಂದುಕೊಂಡೆ. ಆದರೆ ಅಪ್ಪನೇ ಮಾತನಾಡಿದ.

``ಹುಡುಗನನ್ನು ನೋಡಿದ್ದೇನೆ. ಇದೇ ಊರಿನಲ್ಲಿದ್ದಾನೆ. ಒಳ್ಳೆಯ ಬಿಸಿನೆಸ್ಸು. ನಮಗೂ ಆಗಾಗ ಸಹಾಯ ಮಾಡುತ್ತಿರುತ್ತಾನೆ. ಕಾಲು ಸ್ವಲ್ಪ ಕುಂಟು ಅಷ್ಟೇ. ಮತ್ಯಾವುದೇ ಐಬಿಲ್ಲ...''

ಅಪ್ಪ ಹೇಳುತ್ತಲೇ ಇದ್ದ. ನಾನು ಸಿಟ್ಟಾದೆ. ನನ್ನ ವಿಷಯವನ್ನು ಹೇಳಿದೆ. ರಂಜಿತ್‌ನನ್ನೇ